**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.**

**<u>ಸಿ.ಸಿ.ನಂ. 2509/2021</u>**

ದಿನಾಂಕಃ **29.07.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು ಃ | ಲಕ್ಷ್ಮೀ | ಚಾಸಾ-2, ಪ್ರಾಸ.-2 |
| ತಂದೆಯ ಹೆಸರುಃ | ತಾರನಾಥ | |
| ವಯಸ್ಸು ಃ | 35 ವರ್ಷ | |
| ಉದ್ಯೋಗ ಃ | ಖಾಸಗಿ ನೌಕರಿ | |
| ವಾಸ ಃ | ಬೆಂಗಳೂರು | |

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>

ಚಾಸಾ-1 ಮತು 3 ನನ್ನ ತಂಗಿ. ಚಾಸಾ-4 ನನ್ನ ತಂದೆ. 1 ರಿಂದ 6 ನೇ ಆರೋಪಿತರು ನನಗೆ ಗೊತ್ತು. ದಿಃ 30.05.2021 ರಂದು ಸಂಜೆ 5.30 ಗಂಟೆ ಸಮಯದಲ್ಲಿ ಚಾಸಾ-1 ಮತ್ತು 3 ರವರೊಂದಿಗೆ ಹೊಗರೆಹಳ್ಳಿ ಗ್ರಾಮದ ಸರ್ವೆ ನಂ 173ಃ1 ರ ಜಮೀನಿಗೆ ಹೋದಾಗ ಆರೋಪಿತರು ನಮ್ಮ ಜಮೀನಿಗೆ ಅಕ್ರಮ ಪ್ರವೇಶ ಮಾಡಿರುತ್ತಾರೆ. ನಾವು ಅವರ ಬಳಿ ಈ ಜಮೀನು ನಮ್ಮ ತಂದೆ ಹೆಸರಿನಲ್ಲಿದ್ದು ಯಾಕೆ ನೀವು ನಮ್ಮ ಜಮೀನಿಗೆ ಬಂದಿರುತ್ತೀರಿ ಎಂದು ಕೇಳಿದಾಗ ಆರೋಪಿತರು ನನಗೆ ಅವ್ಯಾಚ್ಯ ಶಬ್ದಗಳಿಂದ ಬೈದು ನಮ್ಮ ಮೇಲೆ ಹಲ್ಲೆ ಮಾಡಿರುತ್ತಾರೆ. 1 ನೇ ಆರೋಪಿಯು ಚಾಸಾ-1 ರವರಿಗೆ ಕತ್ತಿಯನ್ನು ಹಿಡಿದುಕೊಂಡು ಹಲ್ಲೆ ಮಾಡಲು ಹೋದಾಗ ನಾನು ಕತ್ತಿಯನ್ನು ಅಡ್ಡ ಹಿಡಿದಿರುತ್ತೇನೆ. ಪರಿಣಾಮವಾಗಿ ನನ್ನ ಬಲಗೈ ಅಂಗೈಗೆ ಗಾಯವಾಗಿರುತ್ತದೆ. ಘಟನೆಯನ್ನು ನಾನು ನನ್ನ ಮೊಬೈಲ್ ನಲ್ಲಿ ಚಿತ್ರೀಕರಿಸುತ್ತಿದ್ದೆ. 1 ನೇ ಆರೋಪಿ ಮತ್ತು ಆತನ ಮಕ್ಕಳಾದ 4 ಮತ್ತು 5 ನೇ ಮಕ್ಕಳು ಮೊಬೈಲನ್ನು ಕಿತ್ತುಕೊಂಡು ನನ್ನನ್ನು ತಳ್ಳಿರುತ್ತಾರೆ. ಮೊಬೈಲ್ ನಲ್ಲಿ ಅಳವಡಿಸಿದ್ದ ಮೆಮೊರಿ ಕಾರ್ಡನ್ನು ಆರೋಪಿತರು ತೆಗೆದಿರುತ್ತಾರೆ. ಚಾಸಾ-3 ರವರಿಗೆ 1 ನೇ ಆರೋಪಿ ಕೈಯಿಂದ ಹೊಡೆದಿರುತ್ತಾರೆ. ಚಾಸಾ-3 ರವರು ಸ್ಥಳದಿಂದ ಓಡಿ ಹೋಗಲು ಪ್ರಯತ್ನಿಸಿ ದೂರವಾಣಿಯಿಂದ ನನ್ನ ಮನೆಗೆ ಮಾಹಿತಿ ತಿಳಿಸಿರುತ್ತಾರೆ. ಚಾಸಾ-1 ರವರನ್ನು ಆರೋಪಿತರು ಕೆಳಗಡೆ ಬೀಳಿಸಿ ಅವರನ್ನು ಹಿಡಿದು ಎಳೆದಾಡಿರುತ್ತಾರೆ. ಘಟನೆಯ ಬಗ್ಗೆ ಪೋಲಿಸರಿಗೆ ಚಾಸಾ-1 ರವರು ದೂರನ್ನು ನೀಡಿರುತ್ತಾರೆ. ಘಟನೆಯ ಬಗ್ಗೆ ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಘಟನೆಯ ಬಗ್ಗೆ ದಿಃ 26.07.2021 ರಂದು ನ್ಯಾಯಾಧೀಶರ ಮುಂದೆ ನನ್ನ ಹೇಳಿಕೆಯನ್ನು ದಾಖಲು ಮಾಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮುಮಾ-1 ರಿಂದ 5 ನ್ನು ನೋಡಿ ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. 2 ರಿಂದ 6 ನೇ ಆರೋಪಿತರು ಗೈರುಹಾಜರಾಗಿದ್ದು ಅವರ ಗುರುತಿನ ಬಗ್ಗೆ ಯಾವುದೇ ತಕರಾರು ಇಲ್ಲಾ ಎಂದು ಆರೋಪಿತರ ಪರ ವಕೀಲರು ಹೇಳಿರುತ್ತಾರೆ. ಸಾಕ್ಷಿಯು ದಿಃ 26.07.2021 ರಂದು ನ್ಯಾಯಾಧೀಶರ ಮುಂದೆ ನೀಡಿದ ಹೇಳಿಕೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-7 ಎಂದು ಗುರುತಿಸಲಾಯಿತು.

**(**ಈ ಹಂತದಲ್ಲಿ ಸಾಕ್ಷಿಯು ಅಭಿಯೊಜನೆಯ ಪ್ರಕರಣಕ್ಕೆ ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ**,** ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ಅವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು**)**

ಪಾಟೀಸವಾಲುಃ ಮಾನ್ಯ ಸಸಅ**.** ರವರಿಂದ ಃ

2 ನೇ ಆರೋಪಿ ನನಗೆ ದೊಣ್ಣೆಯಿಂದ ಹಲ್ಲೆ ಮಾಡಿರುತ್ತಾನೆ ಎಂದರೆ ಸರಿ.

ಪಾಟೀಸವಾಲುಃ ಆರೋಪಿ ಪರ ವಕೀಲರು ಸಮಯಕೋರಿದ್ದರಿಂದ ಮುಂದೂಡಲಾಯಿತು**.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.